ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ, ದ.ಕ., ಮಂಗಳೂರು – 575001.**

**Deputy Commissioner & District Magistrate's Office, Dakshina Kannada, Mangaluru-575001.**

ನಂ. ಎಂಎಜಿ(2)ಸಿಆರ್ 383/2017/22436/ಸಿ4

ದಿನಾಂಕ:30-08-2017

# ಅಧಿಕೃತ ಜ್ಞಾಪನಾ

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಲಾ ಕಾಲೇಜುಗಳಿಗೆ ದಿನಾಂಕ:01-09-2017 ರಂದು ಸಾರ್ವತ್ರಿಕ ರಜೆಯನ್ನು ಘೋಷಿಸುವ ಬಗ್ಗೆ.

ಉಲ್ಲೇಖ: 1)ಶ್ರೀ ಕೆ.ಅಶ್ರಫ್ (ಮಾಜಿ ಮೇಯರ್), ಅಧ್ಯಕ್ಷರು, ದ.ಕ ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟ, ಜುಮ್ಮಾ ಮಸ್ಜಿದ್ ರಸ್ತೆ, ಬಂದರು, ಮಂಗಳೂರು ಇವರ ಮನವಿ ದಿನಾಂಕ: 23-08-2017

2)ಶ್ರೀ ಯೆನಪೋಯ ಅಬ್ದುಲ್ಲಾ ಕುಂಞ, ಮಸ್ಜಿದ್ ಝೀನತ್ ಬಕ್ಷ್ ಮತ್ತು ಈದ್ಗಾ ಜುಮಾ ಮಸ್ಜಿದ್, ಮಂಗಳೂರು ಇವರ ಮನವಿ ದಿನಾಂಕ: 28-08-2017

---

ಶ್ರೀ ಕೆ.ಅಶ್ರಫ್ (ಮಾಜಿ ಮೇಯರ್), ಅಧ್ಯಕ್ಷರು, ದ.ಕ ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟ, ಜುಮ್ಮಾ ಮಸ್ಜಿದ್ ರಸ್ತೆ, ಬಂದರು, ಮಂಗಳೂರು ಉಲ್ಲೇಖ (1) ಮತ್ತು ಶ್ರೀ ಯೆನಪೋಯ ಅಬ್ದುಲ್ಲಾ ಕುಂಞ, ಮಸ್ಜಿದ್ ಝೀನತ್ ಬಕ್ಷ್ ಮತ್ತು ಈದ್ಗಾ ಜುಮಾ ಮಸ್ಜಿದ್, ಮಂಗಳೂರು ಇವರು ಉಲ್ಲೇಖ (2) ರ ಮನವಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬವನ್ನು ಸೆಪ್ಟೆಂಬರ್ 1 ರಂದು ಆಚರಿಸುತ್ತಿರುವುದರಿಂದ,ಜಿಲ್ಲೆಯಲ್ಲಿ ಸರಕಾರಿ ರಜೆಯನ್ನು ದಿನಾಂಕ:01-09-2017 ರಂದು ಘೋಷಿಸುವಂತೆ ಕೋರಿರುತ್ತಾರೆ. ಆದರೆ ಸಾರ್ವತ್ರಿಕ ರಜೆಯನ್ನು ಸರ್ಕಾರದಿಂದ ಘೋಷಿಸಬೇಕಿರುತ್ತದೆ.

ಅದಾಗ್ಯೂ, ಈ ವಿಚಾರದ ಬಗ್ಗೆ ಪರಿಶೀಲಿಸಲಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಸ್ಲಿಂ ಬಾಂಧವರು ದಿನಾಂಕ:01-09-2017 ರಂದು ಬಕ್ರೀದ್ ಹಬ್ಬವನ್ನು ಆಚರಿಸುತ್ತಿರುವುದರಿಂದ, **ಡಾ.ಕೆ.ಜಿ.ಜಗದೀಶ, ಭಾ.ಆ.ಸೇ., ಜಿಲ್ಲಾಧಿಕಾರಿ** ಹಾಗೂ ಜಿಲ್ಲಾ ದಂಡಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ದಿನಾಂಕ:01-09-2017 ರಂದು ರಜೆ ನೀಡುವುದು ಸೂಕ್ತ ಎಂದು ಭಾವಿಸಿ, **ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ಮಾತ್ರ ದಿನಾಂಕ:01-09-2017** ರಂದು ರಜೆಯನ್ನು **ಘೋಷಿಸಿ ಆದೇಶಿಸಿರುತ್ತೇನೆ ಹಾಗೂ ದಿನಾಂಕ:02-09-2017** ರಂದು ಎಲ್ಲಾ ಶಾಲಾ ಕಾಲೇಜುಗಳು ಎಂದಿನಂತೆ ಕರ್ತವ್ಯ ನಿರ್ವಹಿಸುವುದು. **ಶಾಲಾ ಕಾಲೇಜುಗಳಲ್ಲಿ ದಿನಾಂಕ:01-09-2017** ರಂದು ನಿಗಧಿಯಾಗಿರುವ ಆಂತರಿಕ ಪರೀಕ್ಷೆ **(Internal Exam)** ನ್ನು **ದಿನಾಂಕ:02-09-2017** ರಂದು ನಡೆಸಲು ಕ್ರಮ ಕೈಗೊಳ್ಳುವುದು.

ಡಾ.ಕೆ.ಜಿ.ಜಗದೀಶ ಭಾ.ಆ.ಸೇ.,
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ರಿಗೆ,

1)ಉಪ ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು

2)ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದ.ಕ ಮಂಗಳೂರು

3)ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ದ.ಕ ಮಂಗಳೂರು

4)ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ದ.ಕ ಮಂಗಳೂರು

5)ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಂಗಳೂರು